CH-1B.

SDA-RF-CH-1B.16

# ಸ್ವಲ್ಪ ನೀವು, ಸ್ವಲ್ಪ ನಾವು ...



# ಮಕ್ಕಳ (ಶಿಶುಗಳ) ಭವಿಷ್ಯವು ಆರೋಗ್ಯಕರವಾಗಲಿ.

## ಇಂದಿನ ಮಕ್ಕಳೇ ನಾಳಿನ ಪೌರರು.



ನೀವು ಈ ಹಸುಗೂಸುಗಳ ಮುಗ್ಧ ಮುಖಗಳನ್ನು ಕಂಡಿದ್ದೀರಿ. ಇವು ನಿಮ್ಮ ಹಳ್ಳಿಯ ಮಕ್ಕಳೇ - ಈ ಗ್ರಾಮದ ಭವಿಷ್ಯದ ಪೌರರು. ಅವರ ಭವಿಷ್ಯದ ಬಗ್ಗೆ ನಿಮ್ಮ ಸಂಪೂರ್ಣ ನಂಬಿಕೆಯು ದೃಢವಾಗಿದೆ. ನೀವು ಸದಾ ಕಾಲ ಇವರ ಏಳಿಗೆಯನ್ನೇ ಬಯಸುತ್ತೀರಿ.

ಆದರೆ ಸತ್ಯವು ಯಾವಾಗಲೂ ಕಹಿಯಾಗಿರುವುದೆಂದು ನೀವು ಬಲ್ಲಿರಿ. ಇವು ಅಜ್ಞಾನ, ಬಡತನ ಹಾಗೂ ರೋಗಗಳ ರೂಪದಲ್ಲಿ ಬರುತ್ತವೆ. ಇವುಗಳ ಸುಲಭವಾದ ಹಾಗೂ ಮೊದಲ ಬಲಿಯು ಶಿಶುವೇ ಆಗಿರುತ್ತದೆ.

ಪ್ರತಿ ವರ್ಷ ನಿಮ್ಮ ಹಳ್ಳಿಯಲ್ಲಿ ಜನಿಸಿದ ಶಿಶುಗಳ ಪೈಕಿ ಶೇಕಡಾ 10ರಿಂದ 12 ಮಕ್ಕಳು 5 ವರುಷ ವಯಸ್ಸು ತುಂಬುವ ಮುಂಚೆಯೇ ಮರಣಕ್ಕೀಡಾಗುತ್ತಿರಬಹುದು. ಈ ಅಮೂಲ್ಯ ಜೀವಗಳನ್ನು ಉಳಿಸಲು ಸಾಧ್ಯವಿದೆ.

### ಈ ಸ್ಥಿತಿಯನ್ನು ಬದಲಾಯಿಸಲು ಸಾಧ್ಯವೇ?



ಹೌದು. ಇವೆಲ್ಲವನ್ನೂ ಮಾರ್ಪಡಿಸಬಹುದು. ಈ ದಿಸೆಯಲ್ಲಿ ಕೆಲಸವು ಆಗಲೇ ಆರಂಭವಾಗಿದೆ. ಎಲ್ಲರಿಗೂ ಉತ್ತಮ ಆರೋಗ್ಯ ಲಭಿಸಬೇಕೆಂಬ ಸದುದ್ದೇಶದಿಂದ ಸರಕಾರವು ಈಗಾಗಲೇ ದೇಶವ್ಯಾಪಿಯಾಗಿ ''ರಾಷ್ಟ್ರೀಯ ಶಿಶು ಸಂರಕ್ಷಣಾ ಏವಂ ಸುರಕ್ಷಿತ ಮಾತೃತ್ವ ಕಾರ್ಯಕ್ರಮ'' ವನ್ನು ಆರಂಭಿಸಿದೆ. ಈ ಕಾರ್ಯಕ್ರಮದ ಭಾಗವಾಗಿ ನಿಮ್ಮ ಗ್ರಾಮದಲ್ಲಿ ತಾಯಂದಿರ ಮತ್ತು ಮಕ್ಕಳ ರಕ್ಷಣೆ/ಪಾಲನೆಗಾಗಿ ವ್ಯಾಪಕವಾದ ಸೌಲಭ್ಯಗಳು ಲಭಿಸುವಂತಾಗುತ್ತದೆ.

ಈ ಕಾರ್ಯಕ್ರಮದಲ್ಲಿ ಚಿಕ್ಕ ಮಕ್ಕಳಿಗಾಗಿ ಈ ಕೆಳಕಂಡ ಸೌಲಭ್ಯಗಳು ದೊರಕುತ್ತವೆ :-

- ತಡೆಯಬಹುದಾದಂಥಹ ಆರು ಮಾರಕ ರೋಗಗಳ ರಕ್ಷಣೆಗಾಗಿ ಲಸಿಕೆಗಳು.
- ಅತಿಸಾರ ಭೇದಿ ಹಾಗೂ ನ್ಯುಮೋನಿಯಾಗಳಂಥಹ ಮಕ್ಕಳ ರೋಗಗಳ ತಡೆ ಹಾಗೂ ಚಿಕಿತ್ಸೆ.
- ವಿಟಮಿನ್-ಎ ಕೊರತೆಯಿಂದ ಉಂಟಾಗಬಹುದಾದ ಕುರುಡುತನದ ಮೇಲೆ ನಿಯಂತ್ರಣ.
- ನವಜಾತ ಶಿಶುವಿನ ಉತ್ತಮ ರಕ್ಷಣೆ.

ನಿಮ್ಮ ಗ್ರಾಮ ನಿವಾಸಿಗಳ ಆರೋಗ್ಯ ಹಾಗೂ ಒಳ್ಳೆಯ ಭವಿಷ್ಯಕ್ಕಾಗಿ ನಮಗೆ ನಿಮ್ಮ ಸಹಾಯ ಅವಶ್ಯವಾಗಿದೆ. ಇದರಿಂದ ನಿಮ್ಮ ಹಳ್ಳಿಯಲ್ಲಿ ಜನಿಸಿದ ಪ್ರತಿ ಶಿಶುವೂ ಸಂಪೂರ್ಣವಾಗಿ ಆರೋಗ್ಯವಾಗಿರಲು ಸಾಧ್ಯ. ನಮ್ಮೆಲ್ಲರ ಸಹಕಾರದಿಂದಲೇ ಈ ಕಾರ್ಯವು ಸಾಧ್ಯ.



## ಸ್ವಲ್ಪ ನೀವು, ಸ್ವಲ್ಪ ನಾವು :



ಎ.ಎನ್.ಎಮ್. ಸೋದರಿಯು ಪ್ರತಿ ತಿಂಗಳೂ ನಿಮ್ಮಹಳ್ಳಿಗೆ ಬರುವುದು. ಗರ್ಭಿಣಿ ಸ್ತ್ರೀಯರಿಗೂ ಮತ್ತು ಶಿಶುಗಳಿಗೂ ಅವಶ್ಯಕವಾದ ಲಸಿಕೆಗಳನ್ನು ಹಾಕುವುದು ಮತ್ತು ಎಲ್ಲರ ಆರೋಗ್ಯಕ್ಕಾಗಿ ಇನ್ನೂ ಅನೇಕ ಕೆಲಸಗಳನ್ನು ಮಾಡುವುದು - ಈ ವಿಷಯಗಳು ನಿಮಗೆ ತಿಳಿದೇ ಇವೆ. "ರಾಷ್ಟ್ರೀಯ ಶಿಶು ಸಂರಕ್ಷಣಾ ಏವಂ ಸುರಕ್ಷಿತ ಮಾತೃತ್ವ ಕಾರ್ಯಕ್ರಮ"ದ ಭಾಗವಾಗಿ ನಿಮ್ಮ ಗ್ರಾಮಕ್ಕಾಗಿ ಆಕೆ ಇನ್ನೂ ಅನೇಕ ಕೆಲಸಗಳನ್ನು ಮಾಡಬಲ್ಲಳು. ಉದಾಹರಣೆಗೆ :

- ಅತಿಸಾರ ಭೇದಿ ಹಾಗೂ ನ್ಯುಮೋನಿಯಾಗಳ ಪ್ರಾರಂಭಿಕ ಚಿಕಿತ್ಸೆಯನ್ನು ಮನೆಯಲ್ಲೇ ಮಾಡುವ ಬಗ್ಗೆ ತಾಯಂದಿರಿಗೆ ತಿಳುವಳಿಕೆ ನೀಡುವುದು, ಓ.ಆರ್.ಎಸ್.ನ ಪ್ಯಾಕೆಟ್‌ಗಳನ್ನು ಹಂಚುವುದು ಹಾಗೂ ನ್ಯುಮೋನಿಯಾದ ಔಷಧಿಯನ್ನು ಕೊಡುವುದು.
- ಅನಾರೋಗ್ಯದಿಂದ ಬಳಲುವ ಮಕ್ಕಳನ್ನು ನೋಡಲು, ನವಜಾತ ಶಿಶು ಮತ್ತು ಗರ್ಭವತಿ ಸ್ತ್ರೀಯರ ಆರೈಕೆಗಾಗಿ ಅವರ ಮನೆಗಳಿಗೆ ಭೇಟಿ ಕೊಡುವುದು.
- ಎಲ್ಲ ಗರ್ಭವತಿ ಸ್ತ್ರೀಯರ ನೋಂದಾಯಿಸಿಕೊಳ್ಳುವುದು ಮತ್ತು ಪ್ರಸವ ಪೂರ್ಣ ಪರೀಕ್ಷೆ ಮಾಡುವುದು.
- ಶಿಶುಗಳ ಮತ್ತು ಗರ್ಭಿಣಿ ಸ್ತ್ರೀಯರಿಗೆ ಲಸಿಕೆಗಳನ್ನು ಹಾಕುವುದು.
- ಶಿಶುಗಳ ಆರೈಕೆಯ ಬಗ್ಗೆ ತಾಯಂದಿರಿಗೆ ತಿಳುವಳಿಕೆ ಕೊಡುವುದು.
- ಗರ್ಭಿಣಿಯರಲ್ಲಿ ರಕ್ತಹೀನತೆಯನ್ನು ಹೋಗಲಾಡಿಸಲು ಐರನ್ (ಕಬ್ಬಿಣಾಂಶ) ಹಾಗೂ ಫೋಲಿಕ್ ಆಸಿಡ್ ಮಾತ್ರೆಗಳನ್ನು ಕೊಡುವುದು ಮತ್ತು 3 ವರ್ಷ ವಯಸ್ಸಿಗಿಂತ ಚಿಕ್ಕ ಮಕ್ಕಳಲ್ಲಿ ವಿಟಮಿನ್-ಎಯ ಕೊರತೆಯಿಂದ ಉಂಟಾಗುವ ದೃಷ್ಟಿಮಾಂದ್ಯವನ್ನು ತಡೆಯಲು ವಿಟಮಿನ್-ಎಯ ಡೋಸ್ (dose) ಅನ್ನು ಕೊಡುವುದು.
- ಗರ್ಭ ನಿರೋಧಕಗಳ ಉಪಯೋಗದ ಬಗ್ಗೆ ಸಲಹೆ ನೀಡಿ, ಅದನ್ನು ಪ್ರೋತ್ಸಾಹಿಸುವುದು.
- ತಾಯಂದಿರ ಸಭೆಗಳನ್ನು ಕರೆಯುವುದು.
- ಗ್ರಾಮದ ಎಲ್ಲರ ಆರೋಗ್ಯದ ಬಗ್ಗೆ ಗಮನವಿರಿಸಿ, ಅವಶ್ಯಕವಾದ ಕೆಲಸಗಳನ್ನು ಕೈಗೊಳ್ಳುವುದು.



ನಿಮ್ಮಂಥ ಆದರಣೀಯ ನೇತಾರರು (ಮುಂದಾಳುಗಳು) ಈ ಸೌಲಭ್ಯಗಳ ಬಗ್ಗೆ ತಿಳುವಳಿಕೆ ಹೆಚ್ಚಿಸಿದಾಗಲೇ ಹಾಗೂ ಗ್ರಾಮದ ಜನರನ್ನು ಈ ಕಾರ್ಯಕ್ರಮಗಳ ಪೂರ್ಣ ಪ್ರಯೋಜನ ಪಡೆಯಲು ಪ್ರೋತ್ಸಾಹಿಸಿದಾಗ ಮಾತ್ರವೇ ಎ.ಎನ್.ಎಮ್. ಸೋದರಿ ಹಾಗೂ ಇತರ ಕಾರ್ಯಕರ್ತರ ಶ್ರಮವು ಸಾರ್ಥಕವಾಗುವುದು.

## ನೀವು ಏನು ಮಾಡಬಹುದು?

ಎ.ಎನ್.ಎಮ್. ಸೋದರಿಯ ಮಾಸಿಕ ಭೇಟಿ ಹಾಗೂ ಶಿಶು ಸಂರಕ್ಷಣಾ ಮೇಳಕ್ಕೆ ಪೂರ್ಣ ಮಹತ್ವ ಕೊಡುವುದರಿಂದ ಹಾಗೂ ಈ ಕೆಳಕಂಡ ಕಾರ್ಯಗಳಿಂದ ನಿಮ್ಮ ಸಹಾಯವು ಮಹತ್ವ ಪೂರ್ಣವಾಗುತ್ತದೆ.



- ಎ.ಎನ್.ಎಮ್. ಸೋದರಿಯು ಗ್ರಾಮದ ಶುಭಚಿಂತಕಿ ಎಂಬ ವಿಷಯವನ್ನೂ, ಮನೆ ಮನೆಯಲ್ಲಿ ಆರೋಗ್ಯ ನೆಲಸುವಂತೆ ಮಾಡುವ ಕೆಲಸದಲ್ಲಿ ನಿರತಳಾಗಿದ್ದಾಳೆಂಬ ವಿಷಯವನ್ನೂ ಗ್ರಾಮವಾಸಿಗಳಿಗೆ ಮನದಟ್ಟಾಗುವಂತೆ ಮಾಡಿರಿ.
- ಹೆಚ್ಚು ಹೆಚ್ಚು ಮಹಿಳೆಯರು 'ಶಿಶು ಸಂರಕ್ಷಣಾ ಮೇಳ' ಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸಿರಿ.
- ಶಿಶು ಸಂರಕ್ಷಣಾ ಮೇಳಗಳ ವ್ಯವಸ್ಥೆಯಲ್ಲಿ ಸಾಧ್ಯವಾದಷ್ಟು ಸಹಾಯ ನೀಡಿ. ಗ್ರಾಮದ ಹಿರಿಯ ಮಹಿಳೆಯರಿಗೆ ಎ.ಎನ್.ಎಮ್. ಸೋದರಿಯ ಮೂಲಕ ದೊರಕುವಂಥಹ ಸೌಲಭ್ಯಗಳ ಬಗ್ಗೆ ತಿಳಿಯ ಹೇಳಿರಿ.

ನೀವು ಈ ಕೆಳಕಂಡ ವ್ಯವಸ್ಥೆಗಳನ್ನು ಮಾಡಬಲ್ಲಿರಾದರೆ, ಎ.ಎನ್.ಎಮ್. ಸೋದರಿಗೆ ಬಹಳ ಸಹಾಯವಾಗುತ್ತದೆ.



ಜನರು ಕಲೆತು ಕುಳಿತುಕೊಳ್ಳಲು ಸೂಕ್ತವಾದ ಸ್ಥಳದ ಏರ್ಪಾಡು ಮಾಡುವುದು.

ತಾಯಿ ಹಾಗೂ ಶಿಶುವು ಅಸ್ವಸ್ಥವಾಗಿರುವ ಕುಟುಂಬಗಳ ಬಗ್ಗೆ ಎ.ಎನ್.ಎಮ್.ಗೆ ತಿಳುವಳಿಕೆ ನೀಡುವುದು.

ಮೇಳದ ನಂತರ ಸೌಲಭ್ಯವಿರುವ ಸ್ಥಳದಲ್ಲಿ ತಾಯಂದಿರು ಕುಳಿತುಕೊಳ್ಳುವ ಏರ್ಪಾಡು ಮಾಡುವುದು.

## ಲಸಿಕೆ ಹಾಕಿಸಿಕೊಳ್ಳುವುದನ್ನು ಪ್ರೋತ್ಸಾಹಿಸಿರಿ.




ತಾಯಿತಂದೆಯರಿಗೆ ಟೀಕಾಕರಣದ ಅವಶ್ಯಕತೆಯ ಬಗ್ಗೆ ತಿಳುವಳಿಕೆ ನೀಡುವುದು. ಟೀಕಾಕರಣವು ಶಿಶುಗಳನ್ನು ಆರು ವಿಧವಾದ ಮಾರಕ ಖಾಯಿಲೆಗಳಿಂದ ರಕ್ಷಿಸುತ್ತದೆ :

1. ಟಿ.ಬಿ. (ಕ್ಷಯ)
2. ಡಿಫ್ತೀರಿಯಾ
3. ಹೂಪಿಂಗ್ ಕಾಫ್ (ನಾಯಿ ಕೆಮ್ಮು)
4. ಧನುರ್ವಾತ (ಟೆಟನಸ್)
5. ಪೋಲಿಯೋ ಮತ್ತು
6. ಸೀತಾಳೆ (Measles)

ಈ ಖಾಯಿಲೆಗಳಿಂದ ಮಗುವು ಬಹಳ ಅನಾರೋಗ್ಯಕ್ಕೊಳಗಾಗಬಹುದು, ಅಂಗವಿಕಲತೆಯುಂಟಾಗಬಹುದು, ಮರಣ ಕೂಡಾ ಸಂಭವಿಸಬಹುದು.

## ನವಜಾತ ಶಿಶು ರಕ್ಷಕ ಕಾರ್ಡ್‌ನ ಮಹತ್ವದ ಬಗ್ಗೆ ಜನರಿಗೆ ತಿಳಿಯ ಹೇಳಿರಿ.

ಟೀಕಾಕರಣವು ಒಂದು ನಿಶ್ಚಿತ ಕಾರ್ಯಕ್ರಮದ ಪ್ರಕಾರ ಮಾಡಲ್ಪಡುತ್ತದೆ. ಇದು ಗರ್ಭಿಣಿಯು ಸ್ವಾಸ್ಥ್ಯ ಕೇಂದ್ರಕ್ಕೆ ಮೊದಲ ಬಾರಿ ಭೇಟಿ ಕೊಟ್ಟಂದಿನಿಂದ ಆರಂಭವಾಗುತ್ತದೆ. ಅಂದು ಆಕೆಗೆ ನವಜಾತ ಶಿಶು ರಕ್ಷಣಾ ಕಾರ್ಡ್ ನೀಡಲಾಗುತ್ತದೆ. ಅದರಲ್ಲಿ ಅವಶ್ಯಕವಾದ ಎಲ್ಲಾ ಲಸಿಕೆಗಳ ವಿವರಗಳನ್ನೂ ನಮೂದಿಸಿರುತ್ತಾರೆ. ಇದರ ಒಂದು ಅರ್ಧ ಭಾಗವು ಎ.ಎನ್.ಎಮ್. ಸೋದರಿಯ ಬಳಿಯಿರುತ್ತದೆ. ಮತ್ತು ಉಳಿದರ್ಧವು ಶಿಶುವಿನ ತಾಯಿಯ ಬಳಿ. ತಾಯಿಯು ಇದನ್ನು ಬಹಳ ಜಾಗ್ರತೆಯಿಂದ ಕಾಪಾಡಿ ಇಟ್ಟುಕೊಳ್ಳಬೇಕು ಮತ್ತು ಇದು ಪೂರ್ಣವಾಗುವವರೆಗೆ ಪ್ರತಿ ಬಾರಿಯೂ ಮೇಳದಲ್ಲಿ ತರಬೇಕು. ಸರಿಯಾದ ಸಮಯದಲ್ಲಿ ಪ್ರತಿ ಸೂಜಿಮದ್ದನ್ನೂ ಹಾಕಿಸಿಕೊಳ್ಳಲು ಗ್ರಾಮವಾಸಿಗಳನ್ನೂ ಪ್ರೇರೇಪಿಸಿರಿ.



ಸಮಯಕ್ಕೆ ಸರಿಯಾಗಿ ಟೀಕಾಕರಣವನ್ನು ಮಾಡಿಸಿಕೊಂಡ ಮಕ್ಕಳ ಹೆಸರನ್ನು ಸಭೆಯಲ್ಲಿ ಸಾರ್ವಜನಿಕವಾಗಿ ಘೋಷಿಸುವುದರಿಂದಲೂ ಈ ಕೆಲಸವನ್ನು ಮಾಡಬಹುದು.



## ಸೀತಾಳೆಯ ಸೂಜಿಮದ್ದನ್ನು ಹಾಕಿಸಿಕೊಳ್ಳುವುದು ಏಕೆ ಅವಶ್ಯಕ.

ಸೀತಾಳೆಯು ಮಕ್ಕಳ ಮರಣಕಾರಕ ರೋಗಗಳಲ್ಲಿ ಮುಖ್ಯವಾದದ್ದು. ಸೀತಾಳೆಯು ಬಂದರೆ, ಅದರ ನಂತರ ಅತಿಸಾರ ಭೇದಿಯೂ, ನ್ಯುಮೋನಿಯಾ ಸಾಧಾರಣವಾಗಿ ಶಿಶುವಿಗೆ ಬರಬಹುದು. ಇವು ಮಗುವಿನ ಪ್ರಾಣಕ್ಕೆ ಹಾನಿ ತರಲೂಬಹುದು, ಅಥವಾ ಮಕ್ಕಳಲ್ಲಿ ಸರಿಯಾದ ಪೋಷಣೆಯಿಲ್ಲದಿರುವುದು ಹಾಗೂ ದೃಷ್ಟಿಮಾಂದ್ಯಕ್ಕೆ ಕಾರಣವಾಗಬಹುದು. ಸೀತಾಳೆಯನ್ನು ತಡೆಹಿಡಿಯಲು ಅದರ ಸೂಜಿಮದ್ದನ್ನು ಹಾಕಿಸಿಕೊಳ್ಳುವುದೊಂದೇ ಸರಿಯಾದ ಮಾರ್ಗ.

## ಪೋಲಿಯೋ ನಿರ್ಮೂಲನದಲ್ಲಿ ಸಹಕರಿಸಿ :

ಅನೇಕ ವರ್ಷಗಳಿಗೆ ಮುಂಚೆಯೇ ಪ್ರಪಂಚದಾದ್ಯಂತ ಸಿಡುಬು (Small Pox) ರೋಗವನ್ನು ಸಂಪೂರ್ಣ ನಿರ್ಮೂಲನೆ ಮಾಡಲಾಗಿದೆ. ಈಗ ಅಂಥದೇ ಮತ್ತೊಂದು ಮಹಾಮಾರಿ 'ಪೋಲಿಯೋ'ವನ್ನು ನಿರ್ಮೂಲನೆ ಮಾಡಬೇಕಾಗಿದೆ. ಇದಕ್ಕಾಗಿ ಎಲ್ಲ ಮಕ್ಕಳಿಗೂ ಪೋಲಿಯೋದ ಔಷಧವನ್ನು ಕುಡಿಸಲಾಗುತ್ತದೆ. ನೀವು ನಿಮ್ಮ ಗ್ರಾಮದಲ್ಲಿ ಪೋಲಿಯೋ ಬಗ್ಗೆ ತುಂಬ ಜಾಗರೂಕರಾಗಿರಿ ಮತ್ತು ಯಾವೊಬ್ಬ ಮಗುವಿಗೆ ಪೋಲಿಯೋ ಬಂದರೂ ತಕ್ಷಣವೇ ನಿಮಗೆ ತಿಳಿಸುವಂತೆ ಏರ್ಪಾಡು ಮಾಡಿರಿ.

## ಪೋಲಿಯೋ ರೋಗವನ್ನು ನೀವು ಹೇಗೆ ಗುರುತಿಸಬಹುದು :



ಪೋಲಿಯೋವಿನ ಲಕ್ಷಣಗಳು : ಜ್ವರದೊಡನೆ ಕೈಕಾಲುಗಳಲ್ಲಿ ನಿಶ್ಶಕ್ತಿ ಮತ್ತು 2-3 ದಿನಗಳಲ್ಲಿ ಕೈಕಾಲುಗಳಲ್ಲಿ ಲಕ್ವಾ ಬಡಿಯುವುದು. (ಪಾರ್ಶ್ವ ವಾಯುವು ಏರ್ಪಡುವುದು)

## ಮುಂದಿನ ಹೆಜ್ಜೆ :

ನಿಮ್ಮ ಗ್ರಾಮದ ಯಾವುದೇ ಮಗುವಿನಲ್ಲಿ ಈ ಲಕ್ಷಣಗಳು ಕಂಡು ಬಂದರೂ ಒಡನೇ ಎ.ಎನ್.ಎಮ್. ಸೋದರಿಗೆ ತಿಳಿಸಿರಿ. ಆಕೆಯು 24 ಗಂಟೆಗಳ ಒಳಗೆಯೇ ನಿಮ್ಮ ಗ್ರಾಮದ 3 ವರ್ಷಕ್ಕಿಂತ ಕಿರಿಯ ಎಲ್ಲ ಮಕ್ಕಳಿಗೂ ಪೋಲಿಯೋ ಔಷದಿ ಕೊಡುವ ಏರ್ಪಾಡು ಮಾಡುವಳು. ಈ ಕೆಲಸವನ್ನು ಆಕೆಯು ಒಂದು ವಾರದೊಳಗಾಗಿ ಪೂರ್ತಿ ಮಾಡುವಳು.

## ನವಪ್ರಸವ ಧನುರ್ವಾಯುವಿನ ಸಮಾಪ್ತಿಯಲ್ಲಿ ಸಹಕರಿಸಿ :



ಭಾರತ ದೇಶದಲ್ಲಿ ನವಪ್ರಸವ ಧನುರ್ವಾಯುವಿನಿಂದಾಗಿ ಪ್ರತಿ ವರ್ಷ 2½ ಲಕ್ಷ ನವಜಾತ ಶಿಶುಗಳು ಮರಣಕ್ಕೀಡಾಗುತ್ತಾರೆ. ಈ ರೋಗವು ಮಗುವು ಜನಿಸಿದ ನಂತರ ಪ್ರಾಯಶಃ ಒಂದು ವಾರದೊಳಗೆ ಕಾಣಿಸಿಕೊಳ್ಳುತ್ತದೆ. ಇದರ ಲಕ್ಷಣಗಳು : ಸ್ತನಪಾನ ಮಾಡಲಾರದೆ ಹೋಗುವುದು (ತಾಯಿಯ ಎದೆ ಹಾಲು ಕುಡಿಯಲಾರದೆ ಹೋಗುವುದು) ಕೈಕಾಲುಗಳ ಸೆಟೆತುಕೊಳ್ಳುವುದು, ಬೆನ್ನು ಮೂಳೆಯು ಬಿಲ್ಲಿನಂತೆ (ಧನುಸ್ಸಿನಂತೆ) ಬಾಗುವುದು, (ಈ ಕಾರಣದಿಂದಲೇ ಈ ರೋಗಕ್ಕೆ ಧನುರ್ವಾಯು ವೆಂಬ ಹೆಸರು ಬಂದಿದೆ.) ಮತ್ತು ಕೈಕಾಲುಗಳನ್ನು ಒದರುವುದು. ಈ ಲಕ್ಷಣಗಳಿಂದ ಮರಣ ಸಂಭವಿಸಬಹುದು. ಗ್ರಾಮದಲ್ಲಿ ಈ ರೀತಿಯ ಮರಣವು ಸಂಭವಿಸಿದಲ್ಲಿ ಕೂಡಲೇ ಎ.ಎನ್.ಎಮ್. ಸೋದರಿಗೆ ತಿಳಿಸಿ. ಆಕೆಯು ಕೂಡಲೇ ಸತರ್ಕಳಾಗುತ್ತಾಳೆ. ಧನುರ್ವಾಯುವಿನ ಸೂಜಿಮದ್ದು ಹಾಗೂ ಪ್ರಸವ ಸಮಯದಲ್ಲಿ ಸ್ವಚ್ಛತೆಯನ್ನು ಪಾಲಿಸುವುದರಿಂದ ಮಾತ್ರ ಈ ರೋಗದಿಂದ ರಕ್ಷಣೆ ಪಡೆಯಲು ಸಾಧ್ಯ. ಗರ್ಭವತಿಯ ಕುಟುಂಬದವರಿಗೆ - ಆಕೆ ಗರ್ಭ ಧರಿಸಿದ್ದು ತಿಳಿದ ಕೂಡಲೇ ಟಿ.ಟಿ.ಯ ಎರಡು ಸೂಜಿಮದ್ದುಗಳನ್ನು ಹಾಕಿಸಿಕೊಳ್ಳಬೇಕೆಂದೂ, ಪ್ರಸವ ಸಮಯದಲ್ಲಿ ಸಂಪೂರ್ಣ ಸ್ವಚ್ಛತೆಯನ್ನು ಪಾಲಿಸಬೇಕೆಂದೂ ತಿಳಿಸಿ.

## ವಿಟಮಿನ್-ಎ ಯ ಕೊರತೆ :



ರಾತ್ರಿಯ ಸಮಯದಲ್ಲಿ ಕಣ್ಣು ಕಾಣದಿರುವಂತಹ ಮಕ್ಕಳನ್ನು ನೀವು ನಿಮ್ಮ ಗ್ರಾಮದಲ್ಲಿ ನೋಡಿರಬಹುದು ಅಥವಾ ಅಂಥಹ ಮಕ್ಕಳ ಬಗ್ಗೆ ಕೇಳಿರಬಹುದು. ಇದನ್ನು ಇರುಳುಕಣ್ಣು ಎಂದು ಕರೆಯುತ್ತಾರೆ. ಶರೀರದಲ್ಲಿ ವಿಟಮಿನ್-ಎ ಯ ಕೊರತೆಯ ಪ್ರಥಮ ಲಕ್ಷಣವಿದು. ಮೂರು ವರ್ಷ ವಯಸ್ಸಿಗಿಂತ ಚಿಕ್ಕ ಮಕ್ಕಳಲ್ಲಿ ವಿಟಮಿನ್-ಎ ಕೊರತೆಯ ಪ್ರಭಾವವು ಹೆಚ್ಚಾಗಿರುತ್ತದೆ. ಈ ಕೊರತೆಯ ಪ್ರಭಾವವು ಬಹಳ ಶೀಘ್ರವಾಗಿ ಶರೀರದಲ್ಲಿ ಹರಡುತ್ತದೆ. ಮತ್ತು ಇದರಿಂದ ಪೂರ್ಣ ಕುರುಡುತನ (ದೃಷ್ಟಿಹೀನತೆ) ಉಂಟಾಗಬಹುದು.

## ಮಕ್ಕಳ ದೃಷ್ಟಿಯ ಬಗ್ಗೆ ನಿಮ್ಮ ಜವಾಬ್ದಾರಿ :



ಮಕ್ಕಳನ್ನು ವಿಟಮಿನ್-ಎ ಕೊರತೆಯಿಂದಾಗುವ ತೊಂದರೆಗಳಿಂದ ಬಹಳ ಸುಲಭವಾಗಿ ರಕ್ಷಿಸಬಹುದು. ಎ.ಎನ್.ಎಮ್. ಸೋದರಿಯು ಮಗುವು 9 ತಿಂಗಳು ತುಂಬಿದಾಗ ಸೀತಾಳೆಯ ಔಷಧಿಯೊಂದಿಗೆ ವಿಟಮಿನ್-ಎಯ ಒಂದು ಡೋಸ್ (dose ಅನ್ನೂ) ಕೊಡುತ್ತಾಳೆ. ತಾಯಿ ಹಾಲಿನಲ್ಲಿ ಸಾಕಷ್ಟು ವಿಟಮಿನ್-ಎ ಇರುತ್ತದೆ. ಜನನದಿಂದಲೇ ತಾಯಿಯು ಮಗುವಿಗೆ ಎದೆಹಾಲನ್ನು ಕುಡಿಸಬೇಕು. ಮಗುವಿಗೆ 4ರಿಂದ 6 ತಿಂಗಳು ತುಂಬಿದಾಗ ಮನೆಯಲ್ಲೇ ತಯಾರಿಸಿದ ಆಹಾರವನ್ನು ಮಸೆದು ತಿನ್ನಿಸಲು ಆರಂಭಿಸಬೇಕು. ಅದರಲ್ಲಿ ಹಸಿರೆಲೆ ತರಕಾರಿಗಳೂ, ಕ್ಯಾರೆಟ್, ಸೌತೆಕಾರಿ, ಗಾಜರೆಗಳು ಹಾಗೂ ಪರಂಗಿ ಹಣ್ಣು (ಪಪ್ಪಾಯಿ) ಮತ್ತು ಮಾವಿನ ಹಣ್ಣನಂಥಹ ಹಳದಿಯ ಸಿಪ್ಪೆಯಿರುವಂತಹ ಹಣ್ಣುಗಳೂ ಅವಶ್ಯವಾಗಿರಬೇಕು.

## ಅತಿಸಾರ ಭೇದಿಯನ್ನೂ ಮನೆಯಲ್ಲಿಯೇ ಗುಣ ಮಾಡಲು ಪ್ರೋತ್ಸಾಹ ಕೊಡಿರಿ :

ಎಣಿಸಲಾರದಷ್ಟು ಮಕ್ಕಳು ಅತಿಸಾರ ಭೇದಿಯ ಕಾರಣ ಶರೀರದಲ್ಲಿ ಉಂಟಾಗುವ ದ್ರವಹೀನತೆಯಿಂದ ಮರಣಕ್ಕೀಡಾಗುತ್ತಾರೆ. ಮಗುವಿನ ಭೇದಿಯು ಗುಣವಾಗಲು ಒಡನೆಯೇ ಕ್ರಮ ಕೈಗೊಳ್ಳುವುದು ತುಂಬಾ ಅವಶ್ಯಕ. ಈ ಉಪಚಾರವು ಸಮಯಕ್ಕೆ ಸರಿಯಾಗಿ ದೊರಕಬೇಕೆಂಬ ಮುಖ್ಯಾಂಶವನ್ನು ನೀವು ಮಗುವಿನ ತಾಯಿ ತಂದೆಯರಿಗೆ ತಿಳಿ ಹೇಳಿರಿ. ಮಗುವು ಮೊದಲ ಬಾರಿ ನೀರಾಗಿ ಮಲವಿಸರ್ಜನೆ ಮಾಡಿದ ಕೂಡಲೇ (ಭೇದಿ ಮಾಡಿದ ಕೂಡಲೇ) ಈ ಕೆಳಕಂಡ ಕಾರ್ಯವನ್ನು ಕೈಗೊಳ್ಳಬೇಕು :



- ಮಗುವಿಗೆ ಸ್ತನಪಾನ ಮಾಡಿಸುವುದನ್ನೂ ಇತರ ನೀರಾದ ಆಹಾರಗಳನ್ನು ಕೊಡುವುದನ್ನೂ ಜಾರಿಯಲ್ಲಿಡಿ (ನಿಲ್ಲಿಸಬೇಡಿ).
- ಮನೆಯಲ್ಲೇ ದೊರಕಬಹುದಾದಂತಹ (ಲಭ್ಯವಿರುವ) ತಿಳಿಯಾದ ಆಹಾರಗಳನ್ನು ಮಾಮೂಲು ದಿನಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಮಗುವಿಗೆ ಕೊಡಿ. ಉದಾ : ಅಕ್ಕಿಯ ಗಂಜಿ, ಬೇಳೆಯ ನೀರು, ಮಜ್ಜಿಗೆ ಮತ್ತು ತಿಳಿಯಾದ ಟೀ. (ಚಾಯ್)

ಭೇದಿಯು ಕಡಿಮೆಯಾಗದೆ ಮೊದಲಿನಂತೆಯೇ ಇದ್ದರೆ ಅಥವಾ ಹೆಚ್ಚಾದರೆ ಮೇಲೆ ಹೇಳಿದ ಆಹಾರಗಳೊಂದಿಗೆ ಓ.ಆರ್.ಎಸ್. ಪ್ಯಾಕೆಟ್‌ಗಳು ಪ್ರಾಥಮಿಕ ಆರೋಗ್ಯ ಕೇಂದ್ರ, ಎ.ಎನ್.ಎಮ್. ಸೋದರಿ, ಅಂಗನವಾಡಿ, ಬಾಲವಾಡಿ ಅಥವಾ ಔಷಧಿ ಅಂಗಡಿಗಳಲ್ಲಿ ತಕ್ಷಣವೇ ದೊರಕುತ್ತವೆ. ನೀವು ನಿಮ್ಮ ಗ್ರಾಮದಲ್ಲಿ, ಅವಶ್ಯಕ ಸಮಯದಲ್ಲಿ ಎಲ್ಲರಿಗೂ ಈ ಓ.ಆರ್.ಎಸ್. ಪ್ಯಾಕೆಟ್‌ಗಳು ದೊರೆಯುವಂತೆ ಓ.ಆರ್.ಎಸ್. ಅಂಗಡಿಯನ್ನು ತೆರೆಯಬಹುದು. ಈ ಅಂಗಡಿಯನ್ನು ನೀವು ನಿಮ್ಮ ಮನೆಯಲ್ಲಿ ಅಥವಾ ಅಂಗನವಾಡಿಯಲ್ಲಿ ಅಥವಾ ಪನ್‌ಸಾರೀ ಅಂಗಡಿಯಲ್ಲಿ ಆರಂಭಿಸಬಹುದು. ತಂತಮ್ಮ ಮನೆಯಲ್ಲಿಯೂ ಈ ಪ್ಯಾಕೆಟ್‌ಗಳನ್ನು ತಯಾರಾಗಿ ಇಟ್ಟುಕೊಳ್ಳುವಂತೆ ಜನರನ್ನು ಪ್ರೋತ್ಸಾಹಿಸಿರಿ.

ಭೇದಿಯು ತಂತಾನೇ ಗುಣವಾಗುವಂತಹ ಖಾಯಿಲೆ. ಇದು ಗುಣವಾಗಲು 3-4 ದಿನಗಳು ಹಿಡಿಯುತ್ತದೆ. ತಂದೆ ತಾಯಂದಿರು ಈ ಸಮಯದಲ್ಲಿ ಮಕ್ಕಳಿಗೆ ಮನೆಯಲ್ಲೇ ತಯಾರಾದ ತಿಳಿಯಾದ ಆಹಾರ ಪದಾರ್ಥಗಳನ್ನೂ ಓ.ಆರ್.ಎಸ್.ಅನ್ನೂ ಕೊಡತಕ್ಕದ್ದು. ಯಾವ ರೀತಿಯ ಔಷಧಿಯ ಅವಶ್ಯಕತೆಯೂ ಇಲ್ಲ.



**ಅತಿಸಾರ ಭೇದಿಯಿಂದ ರಕ್ಷಣೆ ಪಡೆಯಲು 3 ಉಪಾಯಗಳು :**
1. ವಾತಾವರಣವು ಶುಭ್ರವಾಗಿರಲಿ. 2. ಕುಡಿಯುವ ನೀರು ಸ್ವಚ್ಛವಾಗಿರಲಿ. 3. ಆಹಾರ ಸೇವಿಸುವ ಮುಂಚೆ ಮತ್ತು ಮಲವಿಸರ್ಜನೆ ಮಾಡಿದ ನಂತರ ಸಾಬೂನಿನಿಂದ ಅಥವಾ ಬೂದಿಯಿಂದ ಚೆನ್ನಾಗಿ ಕೈಗಳನ್ನು ತೊಳೆದುಕೊಳ್ಳತಕ್ಕದ್ದು.

**ನೆನಪಿರಲಿ :**
ಭೇದಿ ತಡೆಗಟ್ಟಲು ಮನೆಯಲ್ಲಿಯೇ ಲಭ್ಯವಿರುವ ತಿಳಿಯಾದ ಆಹಾರ ಪದಾರ್ಥಗಳು ಮತ್ತು ಓ.ಆರ್.ಎಸ್.ನ ಅವಶ್ಯಕತೆಯಿದೆ. ನಿಮ್ಮ ಗ್ರಾಮದಲ್ಲಿ ಯಾವಾಗಲೂ ಓ.ಆರ್.ಎಸ್. ದೊರಕುವಂತೆ ಏರ್ಪಾಡು ಮಾಡಿರಿ.

## ನ್ಯುಮೋನಿಯಾದ ಚಿಕಿತ್ಸೆಯನ್ನು ಶೀಘ್ರವಾಗಿ ಮಾಡಿಸುವಂತೆ ಪ್ರೋತ್ಸಾಹಿಸಿರಿ :



ಮಕ್ಕಳಿಗೆ ಆಗಾಗ್ಗೆ ಕೆಮ್ಮು ಮತ್ತು ಶೀತ ಬರುವುದುಂಟು. ವಿಶೇಷವಾಗಿ ಇವು ಮಳೆಗಾಲ ಮತ್ತು ಚಳಿಗಾಲದಲ್ಲಿ ಬರುತ್ತವೆ. ಇದರ ಚಿಕಿತ್ಸೆಯನ್ನು ಮನೆಯಲ್ಲೇ ಮಾಡಬಹುದು. ಆದರೆ ಆಗಾಗ್ಗೆ ಈ ಕೆಮ್ಮು-ಶೀತವು ನ್ಯುಮೋನಿಯವಾಗಿ ಪರಿಣಮಿಸುತ್ತದೆ. ಕೂಡಲೇ ಇದಕ್ಕೆ ಚಿಕಿತ್ಸೆ ಮಾಡಿಸದಿದ್ದಲ್ಲಿ ಮರಣವು ಕೂಡ ಸಂಭವಿಸಬಹುದು.



ನ್ಯುಮೋನಿಯಾದ ಮೊದಲ ಲಕ್ಷಣಗಳು - ವೇಗವಾದ ಉಸಿರಾಡುವಿಕೆ ಮತ್ತು (ಎದೆಯ ಗೂಡಿನ) ಪಕ್ಕೆಲಬುಗಳ ಚಲಿಸುವಿಕೆ. ಈ ಲಕ್ಷಣಗಳು ಮಗುವಿನಲ್ಲಿ ಕಂಡ ಕೂಡಲೇ ತಾಯಿ ತಂದೆಯರು ಮಗುವನ್ನು ಸ್ವಾಸ್ಥ್ಯ ಕೇಂದ್ರ ಅಥವಾ ಎ.ಎನ್.ಎಮ್. ಸೋದರಿಯ ಬಳಿಗೆ ಕರೆದುಕೊಂಡು ಹೋಗಿ ತೋರಿಸಬೇಕು. ಇದರಿಂದ ನ್ಯುಮೋನಿಯಾ ಎಂಬ ಸಂದೇಹ ಬಂದೊಡನೆ ಸೂಕ್ತ ಚಿಕಿತ್ಸೆ ನೀಡಲನುಕೂಲವಾಗುತ್ತದೆ. ಚಿಕಿತ್ಸೆ ದೊರೆಯುವುದು ತಡವಾದರೆ ಪ್ರಾಣಹಾನಿಯಾಗಬಹುದು. ಒಂದು ವೇಳೆ ಮೇಲ್ಕಂಡ ಸ್ಥಳಗಳಲ್ಲಿ ನ್ಯುಮೋನಿಯಾ ಚಿಕಿತ್ಸೆಯ ಸೌಲಭ್ಯಗಳು ಇಲ್ಲದಿದ್ದಲ್ಲಿ, ಕೂಡಲೇ ಮಗುವನ್ನು ದೊಡ್ಡ ಆಸ್ಪತ್ರೆಗೆ ಕರೆದುಕೊಂಡು ಹೋಗುವುದು.




ದೊಡ್ಡ ಆಸ್ಪತ್ರೆಯ ಹೆಸರು ಮತ್ತು ವಿಳಾಸಗಳನ್ನು ಎಲ್ಲರಿಗೂ ತಿಳಿಸಿರಿ. ಅಲ್ಲಿ ಎಲ್ಲ ರೀತಿಯ ಸೌಲಭ್ಯಗಳೂ ದೊರೆಯುತ್ತವೆ. ಇದಲ್ಲದೆ ಆಪತ್ಕಾಲದಲ್ಲಿ ಆಸ್ಪತ್ರೆ ಸೇರಲು ಸಮಯ ನಷ್ಟವಾಗದಂತೆ ವಾಹನದ ಏರ್ಪಾಡು ಮಾಡುವುದರಲ್ಲಿಯೂ ತಂದೆ ತಾಯಿಗಳಿಗೆ ಸಹಾಯ ಮಾಡಿರಿ.

## ಜನ್ಮದಿಂದಲೇ (ಹುಟ್ಟಿನಿಂದಲೇ) ಕಮ್ಮಿ ತೂಕವಿರುವ ಶಿಶುಗಳು :

ಜನಿಸಿದ ನಂತರ ಮೊದಲನೆಯ ತಿಂಗಳು ಮಗುವಿನ ಜೀವನದಲ್ಲಿ ಬಹಳ ಮಹತ್ವಪೂರ್ಣ ಮತ್ತು ನಾಜೂಕಾದುದು (ಸೂಕ್ಷ್ಮವಾದುದು). ಅನೇಕ ಶಿಶುಗಳು ಈ ಸಮಯದಲ್ಲಿಯೇ ಮರಣಕ್ಕೀಡಾಗುತ್ತಾರೆ. ಸಮಯಕ್ಕಿಂತ ಮುಂಚೆಯೇ ಪ್ರಸವವಾಗುವುದು ಮತ್ತು ಹುಟ್ಟಿನಿಂದಲೇ ತೀರ ಕಡಿಮೆ ತೂಕವಿರುವುದು - ಇದರ ಸಾಮಾನ್ಯ ಕಾರಣಗಳು. ಸಾಧಾರಣವಾಗಿ ಕಡಿಮೆ ತೂಕದ ಮಕ್ಕಳು, ಕಿಶೋರಾವಸ್ಥೆಯಲ್ಲಿರುವ, ರಕ್ತಹೀನತೆಯಿರುವ, ಅಥವಾ ಸ್ವತಃ ತುಂಬಾ ಕಡಿಮೆ ತೂಕವಿರುವ ತಾಯಿಯರು ಜನ್ಮ ಕೊಟ್ಟವರಾಗಿರುತ್ತಾರೆ. ಸ್ತ್ರೀಯು ಪದೇ ಪದೇ ಗರ್ಭಿಣಿಯಾಗುವುದರಿಂದಲೂ, ಪೂರ್ಣ ಗರ್ಭಾವಸ್ಥೆಯಲ್ಲಿ ತುಂಬ ಶಾರೀರಿಕ ಶ್ರಮಕ್ಕೊಳಗಾಗುವುದರಿಂದಲೂ ಅಥವಾ ಗರ್ಭಾವಸ್ಥೆಯಲ್ಲಿ ಪೂರ್ಣ ಸಂತುಲಿತ ಆಹಾರ ಸೇವನೆ ಮಾಡದೆ ಇರುವುದರಿಂದಲೂ - ರಕ್ತಹೀನತೆಗೆ ಒಳಗಾಗುತ್ತಾಳೆ ಮತ್ತು ಅದರಿಂದ ತುಂಬ ನಿಶ್ಶಕ್ತಳಾಗುತ್ತಾಳೆ. ಕಡಿಮೆ ತೂಕದ ಮಕ್ಕಳು ಜನ್ಮಿಸುವುದಕ್ಕೆ ಇದು ಅತ್ಯಂತ ಮುಖ್ಯ ಕಾರಣ. ಆದ್ದರಿಂದ ಕಿಶೋರಾವಸ್ಥೆಯಲ್ಲಿರುವ ಹೆಣ್ಣು ಮಕ್ಕಳ ಮದುವೆ ಮಾಡಬಾರದು ಹಾಗೂ ಇಬ್ಬರು ಮಕ್ಕಳ ಜನನದ ನಡುವೆ ಕಡೇಪಕ್ಷ 3 ವರುಷಗಳ ಅಂತರವಿರುವಂತೆ ಜಾಗ್ರತೆ ವಹಿಸಬೇಕು.





- ನಿಮ್ಮ ಗ್ರಾಮದಲ್ಲಿ ಪ್ರಸವವಾದ ಕೂಡಲೇ ಪ್ರತಿ ನವಜಾತ ಶಿಶುವಿನ ತೂಕವನ್ನು ನೋಡಿ ನಮೂದಿಸಿಟ್ಟುಕೊಳ್ಳುವಂತೆ ಖಾತ್ರಿ ಮಾಡಿಕೊಳ್ಳಿರಿ. ಈ ಕೆಲಸವನ್ನು ಎ.ಎನ್.ಎಮ್. ಸೋದರಿ ಅಥವಾ ದಾದಿಯು ಮಾಡುತ್ತಾಳೆ. ಒಂದು ವೇಳೆ ನವಜಾತ ಶಿಶುವಿನ ತೂಕ 2½ ಕಿಲೋಗ್ರಾಂ ಗಿಂತ ಕಡಿಮೆಯಿದ್ದಲ್ಲಿ, ಶಿಶುವಿನ ವಿಶೇಷ ಆರೈಕೆಯನ್ನು ಹೇಗೆ ಮಾಡಬೇಕೆಂದು ಎ.ಎನ್.ಎಮ್. ಸೋದರಿಯು ತಾಯಿಗೆ ತಿಳಿಯ ಹೇಳುತ್ತಾಳೆ. ಒಂದು ಪಕ್ಷ ಮಗುವನ್ನು ಆಸ್ಪತ್ರೆಗೆ ಕರೆದೊಯ್ಯಬೇಕೆಂದು ಎ.ಎನ್.ಎಮ್. ಸೋದರಿಯು ಅಭಿಪ್ರಾಯ ಪಟ್ಟಲ್ಲಿ, ನೀವು ಈ ಕೆಲಸದಲ್ಲಿ ಆಕೆಗೆ ಸಹಾಯ-ಸಹಕಾರ ನೀಡಿರಿ.

## ನಮಗೆ ನಿಮ್ಮ ಸಹಾಯ ಅವಶ್ಯಕ :

ನೀವು ಗ್ರಾಮದ ಕಲ್ಯಾಣಕ್ಕಾಗಿ ನಿಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದೀರಿ. ನಿಮ್ಮ ಪ್ರಯತ್ನ-ಪ್ರಯಾಸಗಳಿಂದಾಗಿ ಗ್ರಾಮದಲ್ಲಿ ಸುಖ-ಸಂತೋಷಗಳು ನೆಲೆಸಿವೆ. ಗ್ರಾಮದ ಹೊಸ ಪಾಠಶಾಲೆ, ಬಸ್ ಅಥವಾ ಇತರ ವಾಹನಗಳ ಸೌಕರ್ಯ, ಬೀದಿಗಳು ಅಥವಾ ಕೊಳವೆ ಬಾವಿ (Borewell/Tube well) ಎಲ್ಲವೂ ನಿಮ್ಮಂಥಹವರ ಪ್ರಯತ್ನದ ಫಲಗಳೇ ಆಗಿವೆ.

ಗ್ರಾಮದ ಮಕ್ಕಳ ಆರೋಗ್ಯವೇ ನಿಮ್ಮ ನಿಜವಾದ ಗುರಿಯಾಗಿದೆ. ''ರಾಷ್ಟ್ರೀಯ ಶಿಶು ಸಂರಕ್ಷಣಾ ಏವಂ ಸುರಕ್ಷಿತ ಮಾತೃತ್ವ ಕಾರ್ಯಕ್ರಮ'' ದ ಮೂಲಕ ನಿಮ್ಮ ಗ್ರಾಮದ ಮಕ್ಕಳನ್ನು ರೋಗರುಜನಗಳಿಂದ ಹಾಗೂ ಅಕಾಲ ಮರಣದಿಂದ ದೂರವಿಡುವ ಕಾರ್ಯದಲ್ಲಿ ನಿಮ್ಮ ಸಹಯೋಗವು ತುಂಬ ಅಮೂಲ್ಯವಾದುದು. ನಿಮ್ಮಿಂದ ಪ್ರೇರಿತರಾದ ಗ್ರಾಮದ ಇತರ ಯುವಕರು ಇದರಲ್ಲಿ ಭಾಗಿಗಳಾಗುವರು. ಗ್ರಾಮವಾಸಿಗಳಿಗಾಗಿ ಇದು ನಿಮ್ಮಿಂದ ಆಗಬಹುದಾದಂಥಹ ಅತ್ಯಂತ ಮಹತ್ವಪೂರ್ಣ ಹಾಗೂ ಚಿರಸ್ಥಾಯಿ ಯೋಗದಾನ.



ಕುಟುಂಬ ಕಲ್ಯಾಣ ವಿಭಾಗ

ಭಾರತ ಸರಕಾರ.